MYSORE LEGISLATIVE ASSEMBLY

TWELFTH DAY

Tuesday, 11th August 1959.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI S. R. KANTHI, B.A., LL.B.) in the Chair.

STARRED QUESTIONS

(to which oral answers were given)

Fair prices for the Foodgrains.

*Q—12. Sri B. G. KHOT (Sadalga). —

Will the Government be pleased to state:—

the steps taken to give and guarantee fair prices for the foodgrains grown by the agriculturists?

A.—Sri K. F. PATIL (Minister for Forest and Transport).—

The Government of India have notified the maximum prices at which paddy/rice should be sold in any one transaction of more than 10 maunds in the State of Mysore and these prices are adopted for purchase by Government. Government are prepared to buy any quantity of paddy/rice offered by the agriculturists at these rates.

As regards ragi and jowar, the open market prices are favourable to the agriculturists.

ಶ್ರೀ ಬಿ. ಜಿ. ಖೋತ್.—ಹತ್ತು ಮಣಗಳ ಮೇಲ್ಪಟ್ಟು ಮಾರುವುದರ maximumದರಗಳನ್ನು ಕೇಂದ್ರ ಸರ್ಕಾರದವರು ನಿಗದಿಮಾಡಿದ್ದಾರೆಂದು ಉತ್ತರದಲ್ಲಿ ಹೇಳುತ್ತಾರೆ ಹತ್ತು ಮಣಗಳ ಮೇಲ್ಪಟ್ಟದ್ದಕ್ಕೆ ಬೇರೆ ದರ ಮತ್ತು ಹತ್ತು ಮಣಗಳಿಗೆ ಒಳಪಟ್ಟದ್ದಕ್ಕೆ ಒಂದು ದರವಿದೆಯೇ?

ಶ್ರೀ ಕೆ. ಎಫ್. ಪಾಟೀಲ್.—ಸಣ್ಣಸಣ್ಣ ಚಿಲ್ಲರೆ ವಾಪಾರಕ್ಕೆ ನಿಗದಿ ಮಾಡುವುದು ಅವಶ್ಯವಲ್ಲ. ಮಾರ್ಜಿನ್ ಇಟ್ಟುಕೊಂಡು ಹಳ್ಳಿಗಳಲ್ಲಿ ಮಾರಾಟ ಮಾಡಬಹುದೆನ್ನುವ ದೃಷ್ಟಿಯಿಂದ ಹತ್ತು ಮಣಗಳಿಗೆ ಮೇಲ್ಪಟ್ಟು ಮಾರಾಟ ಮಾಡುವುದನ್ನು ನಿಯಂತ್ರಣ ಮಾಡಲು ಹಾಗೆ ತಿಳಿಸಿದ್ದಾರೆ. ಬೆಲೆಗಳೆಲ್ಲ ಒಂದೇ.

ಶ್ರೀ ಬಿ. ಜಿ. ಖೋತ್.—ಬೆಳೆಗಳನ್ನು ತೆಗೆಯಬೇಕಾದರೆ ವ್ಯವಸಾಯಗಾರರಿಗೆ ಏನು ಖರ್ಚು ಬೀಳುತ್ತದೆಯೋ ಅದಕ್ಕೂ ಈ ದಿನ ಸರ್ಕಾರ ಕೊಡುತಕ್ಕ ಬೆಲೆಗೂ ಸರಿಹೋಗುತ್ತದೆಯೇ?

ಶ್ರೀ ಕೆ. ಎಫ್. ಪಾಟೀಲ್.—ಅಗ್ರಿಕಲ್ಚರಲ್ ಪ್ರೊಡಕ್ಷನ್ ಕಾಸ್ಟ್ ಬಹಳ ಕಾಂಪ್ಲಿಕೇಟೆಡ್ ಪ್ರೊಸೆಸ್ ಇರುವುದರಿಂದ ಅದನ್ನು ಸಾಮಾನ್ಯವಾಗಿ average ತೆಗೆದುಕೊಂಡು ನೋಡಬೇಕೇ ವಿನಾ ಸರಿಯಾಗಿ ಹೇಳುವುದು ಕಷ್ಟ.

ಶ್ರೀ ಕೆ. ಎಲ್. ನರಸಿಂಹಯ್ಯ.—Price guarantee ಇಲ್ಲದೇ ಇರುವುದರಿಂದಲ್ಲವೇ ಆಹಾರ ಪದಾರ್ಥಗಳನ್ನು ಬೆಳೆಯುವುದರಲ್ಲಿ ಕಡಮೆಯಾಗಿರುವುದು?

ಶ್ರೀ ಕೆ. ಎಫ್. ಪಾಟೀಲ್.—ಗ್ಯಾರಂಟೀ ಕೊಡುವುದು ಕಷ್ಟವೆನ್ನುವ ಮಾತನ್ನು Agricultural Economic Conferenceನಲ್ಲಿಯೂ ಮತ್ತು All India Food Ministers Conference ನಲ್ಲಿಯೂ ಚರ್ಚೆ ಮಾಡಿದ್ದಾರೆ. Price guarantee ಮಾಡಬೇಕಾದದ್ದು ಅತ್ಯಗತ್ಯವಾಗಿದ್ದರೂ ಮಾಡುವುದು ಕಷ್ಟವಾಗಿದೆ.

Sri C. K. RAJAIAH SETTY.—Is the Government aware that when compared to the commercial crops the price of foodgrain is very sober and therefore there is lack of production?

ಶ್ರೀ ಕೆ. ಎಫ್. ಪಾಟೀಲ್.—ಅಷ್ಟೊಂದು ಸಮಂಜಸವಾದುದೆಂದು ಅನ್ನಿಸುವುದಿಲ್ಲ.

Dr. R. NAGAN GOWDA.—What is the quantity of paddy that Government purchased?

ಶ್ರೀ ಕೆ. ಎಫ್. ಪಾಟೀಲ್.—ಈ ವರ್ಷ ಸುಮಾರು 5,43,000 ಪಲ್ಲದಷ್ಟನ್ನು ಕೊಂಡಿದ್ದೇವೆ.

Sri G. VENKATAI GOWDA.—At what rate this was purchased?

Sri K. F. PATIL.—That has been published in the Gazette and made known to all.

ಶ್ರೀ ಎಂ. ರಾಮಪ್ಪ.—ರಾಗಿ ಮತ್ತು ಜೋಳದ ಧಾರಣೆ ರೈತರಿಗೆ ಅನುಕೂಲವಾಗಿದೆ ಎಂದು ಹೇಳಿದ್ದೀರಿ. ಆದರೆ ಇದು ಕಡಮೆಯಾಗದಂತೆ stabilige ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಕೆ. ಎಫ್. ಪಾಟೀಲ್.—ಇದು ಮಹತ್ವದ ಪ್ರಶ್ನೆ ಮತ್ತು 1955ರಲ್ಲಿ price stabilisation ಮಾಡಬೇಕೆನ್ನುವ ದೃಷ್ಟಿಯಿಂದ ಒಂದು ಆರ್ಡರ್ ಹೊರಬಿದ್ದರೂ ಕೂಡ, ನಿರ್ದಿಷ್ಟಬೆಲೆಗಿಂತ ಕೆಳಕ್ಕೆ

(ಶ್ರೀ ಕೆ. ಎಫ್. ಪಾಟೀಲ್)

ಹೋಗಬಾರದೆಂದು ಆ ರೀತಿ ಮಾಡಿದ್ದರೂ ಕೂಡ ಈ ಪದಾರ್ಥಗಳ ಬೆಲೆಯು 1956ರಿಂದೀಚೆಗೆ maximumಗಿಂತ ಹೆಚ್ಚಾಗಿದೆಯೇ ಹೊರತು ಕಡಮೆ ಯಾಗಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಕೊಂಡುಕೊಳ್ಳ ತಕ್ಕ ಬೆಲೆಗೂ ಮಾರ್ಕೆಟ್ ಬೆಲೆಗೂ ವ್ಯತ್ಯಾಸ ವಿರುವುದರಿಂದ ರೈತನಿಗೆ ತಾನು ಆಹಾರ ಪದಾರ್ಥ ಗಳನ್ನು ಬೆಳೆಯುವುದರಲ್ಲಿ incentive ಮಾಯವಾಗಿದೆ ಯಲ್ಲವೇ ?

ಶ್ರೀ ಕೆ. ಎಫ್. ಪಾಟೀಲ್.—ಕೊಳ್ಳತಕ್ಕ ಬೆಲೆ Government procurement policyಗೆ ಸಂಬಂಧ ಪಟ್ಟಿದ್ದೇವಿನಾ ಆಹಾರಧಾನ್ಯಗಳ price stabilisation ಮಾಡುವ ದೃಷ್ಟಿಯಿಂದ ಅಲ್ಲ ಮತ್ತು ಅದಕ್ಕೆ ಸಂಬಂಧಪಡುವುದಿಲ್ಲ.

Minor irrigation schemes in Sira and Pavagada Taluks.

*Q.—111. Sri T. TAREGOWDA (Sira).—

Will the Government be pleased to state :—

(*a*) the details of the minor irrigation schemes sanctioned in Sira and Pavagada taluks ;

(*b*) the works under progress in the said taluks ;

(*c*) the works for which estimates are prepared and are yet to be prepared and are being proposed in the taluks ?

*A.—Sri H. M. CHANNABASAPPA (Minister for Public Works and Electricity).—

(*a*) Seven tanks in Sira Talnk at a total estimated cost of Rs. 3,12,600 and fourteen tanks in Pavagada Taluk at a total estimated cost of Rs. 1,85,350 (*vide* details given in Statement I placed on the Table of the House). (Placed in the Legislature Library No. 9/LA—July-August Session, 1959).

(*b*) Out of the above, one work in Sira Taluk and five works in Pavagada Taluk are under progress as indicated in the Statement I placed on the Table of the House.

(*c*) Estimates are ready for 4 works in Sira Taluk and for 6 in Pavagada Taluk [*vide* Statement II (A) placed in the Legislature Library] Estimates are yet to be prepared for 6 works in Sira Taluk and 25 works in Pavagada Taluk [*vide* Statement II (B) placed on the Table of the House.]

ಶ್ರೀ ಟಿ. ತಾರೇಗೌಡ.—ಸಿರಾ ಮತ್ತು ಪಾವಗಡ ತಾಲ್ಲೂಕುಗಳು ಪದೇಪದೇ distressಗೆ ಒಳಗಾಗುತ್ತಿರುವುದರಿಂದ ಯಾವಯಾವ ಕೆಲಸಗಳಿಗೆ ಮಂಜೂರಾತಿಯಾಗಿದೆಯೋ ಅವುಗಳನ್ನು ಜಾಗ್ರತೆ ಮಾಡಿಸುವುದಕ್ಕೆ ಪ್ರಯತ್ನಮಾಡುತ್ತೀರಾ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಡಿಸೈನ್ ಆಗಿರುವ ಪ್ರಯುಕ್ತವೇ ಇಪ್ಪೊಂದು ಎಸ್ಟಿಮೇಟುಗಳು ಮಂಜೂರಾಗಿ ಕೆಲಸ ಪ್ರಾರಂಭವಾಗಿದೆ. ಮಂಜೂರು ಆಗಿರುವ ಕೆಲಸಗಳೆಲ್ಲ ಪ್ರಾರಂಭವಾಗುತ್ತವೆ.

ಶ್ರೀ ಟಿ. ತಾರೇಗೌಡ.—ನಮ್ಮ ಭಯವೇನೆಂದರೆ ತಾವು ಮಂಜೂರು ಮಾಡುತ್ತೀರಿ. Execution sideನಲ್ಲಿ ನಿಧಾನವಾಗುತ್ತದೆ. ಹಾಗೆ ನಿಧಾನ ವಾಗದಂತೆ ಜಾಗ್ರತೆ ಮಾಡಿಸಿ ಜನಗಳಿಗೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಂಜೂರು ಮಾಡುವುದು ಎಷ್ಟು ಭರದಿಂದ ಸಾಗುತ್ತದೆಯೋ execution ಸಹ ಅಷ್ಟೇ ಭರವಸೆಯಿಂದ ಸಾಗುತ್ತದೆ.

Acquisition Proceedings for the Extension of Harijan Colonies in Kolar District.

*Q.—198. Sri J. NARAYANAPPA (Mulbagal).—

Will the Government be placed to state :—

(*a*) the number of cases of acquisition proceedings taken up in Kolar district from 1st January 1953 up to this date in connection with the extension of Harijan colonies ;

(*b*) the number of cases in which the Harijans have been benefited and the number of cases pending ?

*A.—Sri Kadidal MANJAPPA (Minister for Revenue).—

(*a*) 165 cases of acquisition proceedings have been taken up during the period from 1st January 1953 to 14th July 1959.

(*b*) 130 and 22 respectively.

ಶ್ರೀ ಜೆ. ನಾರಾಯಣಪ್ಪ.—165 ಕೇಸುಗಳಲ್ಲಿ 130 ಫೈನಲ್ ಆಗಿದೆ ಮತ್ತು 22 ಬಾಕಿ ಉಳಿದಿವೆ ಎಂದು ಉತ್ತರದಲ್ಲಿ ಹೇಳಲಾಗಿದೆ. 13ಕೇಸುಗಳು ಪತ್ತೆ ಇಲ್ಲ ಕಾರಣವೇನು ?

ಶ್ರೀ ಬಿ. ಡಿ. ಜತ್ತಿ.—13ಕೇಸುಗಳು ಪತ್ತೆ ಇಲ್ಲವೆಂದಲ್ಲ. ಅವು ಇತರ ಕೇಸುಗಳು. ಹರಿಜನರಿಗೆ ಸಂಬಂಧಪಟ್ಟ ಕೇಸುಗಳ ವಿಚಾರ ಕೇಳಿದ್ದೀರಿ. ಅದಕ್ಕೆ ಉತ್ತರಕೊಟ್ಟಿದೆ. 13 ಕೇಸುಗಳು ಇತರರಿಗೆ ಸಂಬಂಧಪಟ್ಟವು ಎಂದು ಹೇಳಿದೆ.

†Indicates that the speeches or remarks have not been revised by the member concerned